



ಗಂಭೀರ ಚರ್ಚೆಗಳು ನಡೆದಿವೆ. ಪಾಪ್ ಗಾಯಕ, ನರ್ತಕ ಮೈಕಲ್ ಜಾಕ್ಸನ್ ಬೆಳ್ಳಗಾಗಲು ಮಾಡಿದ್ದ ಸರ್ಕಸ್ಸುಗಳ ಬೇರುಗಳನ್ನು ನೋಡಿ. ಟೆನಿಸ್ ತಾರೆ ಮರಿಯಾ ಶರಪೋವಾ ದೇಹದ ಮೇಲಿನ ಮಚ್ಚೆಗಳ ಸಂಖ್ಯೆ ಹೆಚ್ಚಾಗದಂತೆ ನೋಡಿಕೊಳ್ಳಲು ನಡೆದ ಚಿಕಿತ್ಸೆಗಳ ಕಡೆಗೆ ಕಣ್ಣಾಡಿಸಿ. ಕಪ್ಪಗಿರುವ ಹುಡುಗ ಬೆಳ್ಳಗೆ ಕಾಣಬಯಸುವುದು, ವಿಪರೀತ ಬೆಳ್ಳಗೆ ಇರುವವರು ತುಸು ಕಪ್ಪಗಿರಬೇಕಿತ್ತು ಎಂದುಕೊಳ್ಳುವುದು ಫ್ಯಾಷನ್ ತತ್ವದಲ್ಲಿ ಸಹಜವಾಗಿ ಕೇಳುವಂಥದ್ದು. ಇದನ್ನು 'ವೆರಿ ಗುಡ್ ಲೈಟ್' ಎಂಬ ಫ್ಯಾಷನ್ ಉತ್ಪನ್ನಗಳ ಕಂಪನಿಯ ಮಾಲೀಕ ಡೇವಿಡ್ ಯೀ ತಮ್ಮದೇ ನುಡಿಗಟ್ಟಿನಲ್ಲಿ ಬಿಡಿಸಿಡುವುದು ಹೀಗೆ: 'ನನಗೆ ಮೇಕಪ್ ಇಷ್ಟ. ಅದರಿಂದ ನಾನು ನೋಡುವವರಿಗೆ ಚೆನ್ನಾಗಿ ಕಾಣುತ್ತೇನೆ ಎನ್ನುವುದೊಂದೇ ಮುಖ್ಯವಾಗುವುದಿಲ್ಲ. ಅದರಿಂದ ನನ್ನ ಅಂತರಾತ್ಮಕ್ಕೆ ನೆಮ್ಮದಿ ಸಿಗುತ್ತದೆ. ಆತ್ಮವಿಶ್ವಾಸ ಬರುತ್ತದೆ. ಹೇಗೆ ಕಾಣುತ್ತಿದ್ದೇವೆ ಎನ್ನುವುದಕ್ಕಿಂತ ಇಲ್ಲಿ ಎಷ್ಟು ಖುಷಿಯಾಗಿದ್ದೇವಲ್ಲ ಅನಿಸುವುದಲ್ಲ; ಅದೇ ಮುಖ್ಯ'.

ಸೀದಾ ಅಮೆರಿಕ, ಯುರೋಪ್ ದೇಶಗಳ ಮಾತಿನಿಂದ ನಮ್ಮ ನೆಲದತ್ತ ವಿಷಯಾಂತರ ಮಾಡೋಣ.

ನಟ ಜಗ್ಗೇಶ್ ಅದೊಂದು ದಿನ ತಲೆ ಮೇಲೆ ಕೈಹೊತ್ತು ಕೂತಿದ್ದರು. ಅವರು ದಶಕಗಳ ಕಾಲ ಬಳಸುತ್ತಿದ್ದ ಫೌಂಡೇಷನ್ ಕ್ರೀಮ್ ಕಂಪನಿ ಬಾಗಿಲು ಮುಚ್ಚಿತ್ತು. ಇನ್ನೊಂದನ್ನು ಟ್ರೈ ಮಾಡಲು ಅವರು ಸಿಂಗಾಪುರಕ್ಕೆ ಹೋಗಿ ಬಂದಿದ್ದರು. ಮುಂಗೈ ಮೇಲ್ಭಾಗಕ್ಕೆ ಆ ಹೊಸ ಕ್ರೀಮನ್ನು ಹಚ್ಚಿ, ಒಂದು ಹದದಲ್ಲಿ ತಿಕ್ಕಿದರು. ಅದನ್ನು ಹಚ್ಚಿದ ಭಾಗದಲ್ಲಿ ಮೂಡಿದ ಹೊಳಪನ್ನು ಕಂಡು ಅವರಿಗೆ ಪುಳಕ. ಕ್ಯಾಮೆರಾ ಎದುರು ನಿಲ್ಲುವ ಕಪ್ಪು ಬಣ್ಣದ ನಟರಿಗೆ ಮೇಕಪ್ ಅದೆಷ್ಟು ಮುಖ್ಯ ಎಂದು ಅವರು ಅಂದು ನಿಮಿಷಗಟ್ಟಲೆ ಮಾತನಾಡಿದ್ದರು. ಹೆಣ್ಣುಮಕ್ಕಳು ತವರಿನಲ್ಲಿ ಕೊಟ್ಟ ಒಡವೆಗಳನ್ನು ಜೋಪಾನವಾಗಿ ಲಾಕರ್‌ನಲ್ಲಿ ಇಡುತ್ತಾರಲ್ಲ; ಹಾಗೆ ಜಗ್ಗೇಶ್ ಕೂಡ ತಮ್ಮ ಮೇಕಪ್ ಸೆಟ್ಟನ್ನು ಲಾಕರ್‌ನಲ್ಲೇ ಇಡುವುದಾಗಿ ಹೇಳಿಕೊಂಡಿದ್ದರು.

ಜಗ್ಗೇಶ್ ಹೀಗೆ ಹೇಳಲು ಅವರ ವೃತ್ತಿಧರ್ಮ ಕಾರಣ. ಅವರ ನುಡಿ ಹೊಮ್ಮಿದ ಕೆಲವೇ ವರ್ಷಗಳಲ್ಲಿ ಲಾರಿಯಲ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ವಿಸ್ಮಯ್ ಶರ್ಮ ಇಂಗ್ಲೆಂಡ್ ನೆಲದಲ್ಲಿ ನಿಂತು, 'ಪುರುಷರ ಮೇಕಪ್‌ಗೆ ಡಿಮ್ಯಾಂಡ್ ನಾವಂದುಕೊಂಡದ್ದಕ್ಕಿಂತ ಜಾಸ್ತಿಯಾಗುತ್ತಿದೆ' ಎಂದಿದ್ದರು. ಅಷ್ಟೇ ಅಲ್ಲ, 2020ರ ಹೊತ್ತಿಗೆ ದೊಡ್ಡ ಡಿಪಾರ್ಟ್‌ಮೆಂಟ್ ಸ್ಟೋರ್‌ಗಳಲ್ಲೂ ಪುರುಷರಿಗೆ ಮೇಕಪ್ ಮಾಡುವ ಕೌಂಟರ್‌ಗಳು ತೆರೆದುಕೊಳ್ಳಲಿವೆ ಎಂದು ಭವಿಷ್ಯ ನುಡಿದಿದ್ದರು.

ಅವರ ಮಾತನ್ನು ಸಾಕಾರಗೊಳಿಸಲೋ ಎಂದಂತೆ ಇವತ್ತು 'ಬ್ಯೂಟಿ ಬ್ಲಾಗರ್'ಗಳಿದ್ದಾರೆ. 'ಜಾರ್ಡಿ ಶೋರ್', 'ಮೇಡ್ ಇನ್ ಚೆಲ್ಸಿ' ತರಹದ ಟಿ.ವಿ ರಿಯಾಲಿಟಿ ಷೋಗಳು ಪುರುಷರ ಕಾಸ್ಮೆಟಿಕ್ ಪ್ರಚಾರ ಪಡಿಸಲೆಂದೇ ಪ್ರಸಾರಗೊಂಡಿವೆ.

ಇಷ್ಟೆಲ್ಲ ಮಾತನಾಡುವಾಗಲೂ ಕನ್ನಡಿ ಮುಂದೆ ನಿಂತ ಹುಡುಗ ತನ್ನ ಕೆನ್ನೆ ಮೇಲೆ ಮೂಡಿದ ಮೊಡವೆಯನ್ನು ಹಿಸುಕಿ, ಕೀವನ್ನು ಹೊರಹಾಕುತ್ತಾನೆ. ಮರುದಿನ ಮತ್ತೆ ಕನ್ನಡಿ ಎದುರಲ್ಲಿ ನಿಂತ ಅವನ ಮನಸ್ಸಿನಲ್ಲಿ ಗುಳ್ಳೆಯಾದ ಜಾಗದ ಮಚ್ಚೆ ಹೋದೀತೋ ಇಲ್ಲವೋ ಎಂಬ ಆತಂಕ. 'ಗೂಗಲಿಸಿ', ಮಚ್ಚೆ ಮಾಯ ಮಾಡುವುದು ಹೇಗೆ ಎಂಬ ಸಣ್ಣ ಸಂಶೋಧನೆ ನಡೆಸಿ, ಹೊಸತೇ ಕಾಸ್ಮೆಟಿಕ್‌ನ ಹುಡುಕಾಟಕ್ಕೆ ಬೀಳುವ ಅವನು, 'ಪ್ಲಾಸ್ಟಿಕ್ ಫೇಸ್'ಎನ್ನುವ ಆಧುನಿಕ ಕಾಲದ ಮೇಕಪ್ ಪ್ರಕಾರವನ್ನೂ ಓದಿಕೊಂಡವನೇ. ಶೋಧನೆ, ಪ್ರಯೋಗಗಳ ನಂತರ ಮತ್ತೆ ಕನ್ನಡಿ ಎದುರು ನಿಲ್ಲುವ ಅವನ ಮನಸ್ಸಿನಲ್ಲಿ ಮೇಕಪ್ ಉತ್ಸಾಹ ಮೂಡಿಸುವುದಾದರೆ ಅದಕ್ಕೆ ಮಾರುಕಟ್ಟೆ ದೊಡ್ಡದಿದೆ ಎಂದೇ ಅರ್ಥ.

ನಮ್ಮ ಗಲ್ಲಿಗಳ ಸಲೂನುಗಳಲ್ಲೂ ಈಗ, 'ತಲೆಗೆ ಎಣ್ಣೆ ಹಾಕಿ ಮಾಲಿಷ್ ಮಾಡಲಾ', 'ಕೂದಲಿಗೆ ಬಣ್ಣ ಹಚ್ಚಲಾ' ಎಂದಷ್ಟೇ ಅರ್ಜಿ ಹಾಕುವುದಿಲ್ಲ. 'ಸರ್ ಫೇಷಿಯಲ್ಲು' ಎಂಬ ಆಹ್ವಾನವೂ ಕೇಳಿಬರುತ್ತದೆ. ಪುರುಷರ ಮೇಕಪ್ ಅಂಗಡಿಗಳು ಆನ್‌ಲೈನ್, ಆಫ್ ಲೈನ್ ಎರಡೂ ಕಡೆ ನಗುತ್ತಿರುವುದಕ್ಕೆ ಇದೇ ಸಾಕ್ಷಿ.